ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಪೌರಾಡಳಿತ ಮಂತ್ರಿಗಳು).—

(ಅ) ಹೌದು.

(ಆ) ಇಲ್ಲ.

(ಇ) ಜನತೆಯ ಹಾಗೂ ಸೈಕಲ್ ಸವಾರರ ಅನುಕೂಲಕ್ಕಾಗಿ ಒಂದು ಸಬ್‌ವೇ ನಿರ್ಮಿಸುವ ಯೋಜನೆ ಕಾರ್ಪೊರೇಷನ್‌ನ ಪರಿಶೀಲನೆಯಲ್ಲಿದೆ.

ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದಲ್ಲಿ ನೇಮಿಸಿದ ಜಲಗಾರರು

೯ ಪಿ. ರಾಮದೇವ್ (ಮಲ್ಲೇಶ್ವರಂ).—ಪೌರಾಡಳಿತ ಮಂತ್ರಿಗಳು ಈ ವಿಷಯಗಳನ್ನು ದಯಮಾಡಿ ತಿಳಿಸುವರೆ :—

(ಅ) ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದಲ್ಲಿ ದಿನವಹಿ ನಿರ್ಮಲೀಕರಣ ಮಾಡಲು ನೇಮಿಸಿದ ಜಲಗಾರರೆಷ್ಟು ;

(ಆ) ಈ ವಿಭಾಗದಲ್ಲಿ ಕಸ ಕಡ್ಡಿಯನ್ನು ದಿನ ಸಾಗಿಸಲು ನೀಡಿದ ಲಾರಿಗಳೆಷ್ಟು ;

(ಇ) ಈ ವಿಭಾಗದ ಆವರಣ ನೈರ್ಮಲ್ಯ ಪ್ರಾಮುಖ್ಯವಾಗಿ ದತ್ತಾತ್ರೇಯ ಟಿಂಪಲ್ ಮತ್ತು ಯಶವಂತಪುರ ಡಿವಿಜನ್‌ಗಳಲ್ಲಿ ಸಮರ್ಪಕವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಈ) ಈ ವಿಭಾಗದ ನೈರ್ಮಲ್ಯವನ್ನು ಕಾಪಾಡಲು ಎಲ್ಲ ಬೀದಿಗಳನ್ನು ಗುಡಿಸಲು, ಕಸ ಕಡ್ಡಿ ಪ್ರತಿದಿನ ಸಾಗಿಸಲು ಯಾವುದಾದರೂ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆಯೇ ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಪೌರಾಡಳಿತ ಮಂತ್ರಿಗಳು).—

(ಅ) ೪೩೭.

(ಆ) ೬.

(ಇ) ಹೌದು.

(ಈ) ವಾರಕ್ಕೆ ಎರಡು ಸಲ ಸೇವೆಯಿಲ್ಲದೆ ಇರತಕ್ಕ ಬಡಾವಣೆಯಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಮೇಲ್ಕಂಡ ವಿಧಾನ ಸಭಾ ಕ್ಷೇತ್ರದಲ್ಲಿ ಎಲ್ಲಾ ಕಾರ್ಪೊರೇಷನ್ ರಸ್ತೆಗಳಲ್ಲಿ ಸ್ವಚ್ಛತಾ ಕಾರ್ಯಕ್ಕೆ ಪೌರ ಕಾರ್ಮಿಕರನ್ನು ನೇಮಿಸಲಾಗಿದೆ. ಇದಲ್ಲದೆ ಆಗಾಗ್ಗೆ ತೀವ್ರ ನೈರ್ಮಲೀಕರಣ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ.

ಮಲ್ಲೇಶ್ವರ ವಿಧಾನ ಸಭಾ ಕ್ಷೇತ್ರದಲ್ಲಿರುವ ಕೊಳಚೆ ಪ್ರದೇಶಗಳಿಗಾಗಿ ಕನಿಷ್ಟ ಮಿತಿಯಂ ಪೌರ ಸೌಲಭ್ಯ ನೀಡುವುದು.

೧೦. ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ)—ಪೌರಾಡಳಿತ ಮಂತ್ರಿಗಳು ಈ ವಿಷಯಗಳನ್ನು ದಯಮಾಡಿ ತಿಳಿಸುವರೆ—

(ಅ) ಕಳೆದ ಅಧಿವೇಶನದಲ್ಲಿ ಮಲ್ಲೇಶ್ವರಂ ವಿಧಾನ ಸಭಾ ಕ್ಷೇತ್ರದಲ್ಲಿರುವ ಕೊಳಚೆ ಪ್ರದೇಶಗಳಿಗೆ ಕನಿಷ್ಠ ಮಿತಿಯ ಪೌರ ಸೌಲಭ್ಯ ನೀಡುವುದಾಗಿ ಪೌರಾಡಳಿತ ಮಂತ್ರಿಗಳು ಈ ಸದನದಲ್ಲಿ ನೀಡಿದ ಆಶ್ವಾಸನೆಯನ್ನು ಕಾರ್ಯಗತ ಮಾಡಲಾಗಿದೆಯೇ ;

(ಆ) ಹಾಗಿದ್ದಲ್ಲಿ ಈ ಕೊಳಚೆ ಪ್ರದೇಶಗಳಿಗೆ ನೀಡಿದ ಸೌಲಭ್ಯವೇನು ; ಈ ಸೌಲಭ್ಯಕ್ಕಾಗಿ ಎಷ್ಟು ಹಣ ವ್ಯಯ ಮಾಡಲಾಗಿದೆ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಪೌರಾಡಳಿತ ಮಂತ್ರಿಗಳು).—

(ಅ) ಹೌದು